ಹಮ್ಮಿಕೊಳ್ಳುವ ಮೂಲಕ "ಭೂಮಿ" ಯೋಜನೆಯಿಂದ ದೊರೆತ ಪ್ರಯೋಜನಗಳನ್ನು ಮುಂದುವರೆಸುತ್ತದೆ. ಗ್ರಾಮ ನಕ್ಷೆಗಳನ್ನು ಡಿಜಿಟಲೈಜ್ ಮಾಡಲಾಗುವುದು. ಇದು ಯೋಜನೆಯನ್ನು ರೂಪಿಸುವುದಕ್ಕೆ ಮತ್ತು ಆಡಳಿತಕ್ಕೆ ದತ್ತಾಂಶವನ್ನು ಸೃಷ್ಟಿಸುತ್ತದೆ. ನೋಂದಣಿ ಪ್ರಕ್ರಿಯೆಯನ್ನು ಗಣಕೀಕರಿಸಿರುವುದರಿಂದ ಈಗ ನೋಂದಣಿ ದತ್ತಾಂಶದ ನೆರವಿನಿಂದ ಋಣಭಾರ ಪ್ರಮಾಣಪತ್ರಗಳನ್ನು ನೀಡುವ ಯೋಜನೆಯನ್ನು ಪ್ರಾರಂಭಿಸಲು ಸಾಧ್ಯವಾಗಿದೆ. ಇದರಿಂದ ನೋಂದಣಿ ಪ್ರಕ್ರಿಯೆ ಸುಲಭವಾಗುವುದಷ್ಟೇ ಅಲ್ಲ, ನೋಂದಣಿ ಮತ್ತು ಅದಕ್ಕೆ ಸಂಬಂಧಪಟ್ಟ ಕಾರ್ಯಚಟುವಟಿಕೆಗಳಿಂದ ರಾಜ್ಯಕ್ಕೆ ಬರುವ ಆದಾಯವೂ ಹೆಚ್ಚುತ್ತದೆ.

41. ಹೊಸದಾಗಿ ಚುನಾಯಿತರಾದ ಸದಸ್ಯರಾಗಿ ತಾವೆಲ್ಲರೂ ಜನರ ಕಲ್ಯಾಣಕ್ಕಾಗಿ ಮತ್ತು ರಾಜ್ಯದ ಪ್ರಗತಿಗಾಗಿ ಸಮಾನ ಮನೋಭಾವದಿಂದ ಕಾರ್ಯನಿರ್ವಹಿಸುವಿರೆಂಬ ವಿಶ್ವಾಸ ನನಗಿದೆ. ಬರ ಪರಿಸ್ಥಿತಿಯ ಬವಣೆಗೊಳಗಾದ ರಾಜ್ಯವನ್ನು ಪೂರ್ವಸ್ಥಿತಿಗೆ ತರಲು ತಾವೆಲ್ಲರೂ ಸಂಕುಚಿತ ಮನೋಭಾವವನ್ನು ತೊರೆದು ಒಟ್ಟಾಗಿ ಕಾರ್ಯನಿರ್ವಹಿಸುವ ಸಮಯ ಬಂದಿದೆ. ಕರ್ನಾಟಕದ ಜನತೆ ಮೂರು ವರ್ಷಗಳ ಬರ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿದ್ದಾರೆ. ನನ್ನ ಸರ್ಕಾರವು ಅಂಥ ವಿಪತ್ತುಗಳನ್ನು ನಿಭಾಯಿಸುವುದಕ್ಕೆ ಮತ್ತು ಕರ್ನಾಟಕದ ಜನತೆಯ ಸಂಕಷ್ಟಗಳನ್ನು ಕಡಿಮೆ ಮಾಡುವುದಕ್ಕೆ ಸದಾ ಸನ್ನದ್ಧವಾಗಿರಲು ನಿರ್ಧರಿಸಿದೆ. ಬರ ಪರಿಸ್ಥಿತಿಯ ಮತ್ತು ಸಂಕಷ್ಟದ ದಿನಗಳ ಬವಣೆಯನ್ನು ನೀಗಿಸಲು ಉತ್ತಮವಾಗಿ ಆಗುತ್ತಿರುವ ಮಳೆ ಹಾಗೂ ಬರಲಿರುವ ಒಳ್ಳೆಯ ದಿನಗಳ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ಈ ಉನ್ನತ ಗುರಿಸಾಧನೆಗಾಗಿ ತಾವೆಲ್ಲರೂ ಒಗ್ಗೂಡಿ ಕೆಲಸ ಮಾಡುವಿರೆಂಬ ಮತ್ತು ನಿಮ್ಮನ್ನು ಚುನಾಯಿಸಿದ ಜನರ ಆಶೋತ್ತರಗಳನ್ನು ಈಡೇರಿಸುವಿರೆಂಬ ಭರವಸೆ ನನಗಿದೆ.

ಜೈ ಕರ್ನಾಟಕ

ಜೈ ಭಾರತ್

(ಸದನವು ಮಧ್ಯಾಹ್ನ 1–13 ಗಂಟೆಗೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು).

(ಸದನವು ಪುನಃ ಮಧ್ಯಾಹ್ನ 1.25 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

2. ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ ವಿಧಾನ ಸಭೆ):– ಸನ್ಮಾನ್ಯ ಅಧ್ಯಕ್ಷರೇ (ಅ) ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. ಅನುಬಂಧ–I.